ಜೆಎಸ್‌ಎಸ್ ಮಹಾವಿದ್ಯಾಪೀಠ
ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಜ್ಞಾನವಾರಿಧಿ-50

## ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮ

**15 ನವೆಂಬರ್ 2021 * ಸೋಮವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಸುತ್ತೂರು ಶ್ರೀಕ್ಷೇತ್ರ

ಉಪನ್ಯಾಸ



**ಕನ್ನಡ ಪೂಜಾರಿ ಶ್ರೀ ಹಿರೇಮಗಳೂರು ಕಣ್ಣನ್**
ಪ್ರಖ್ಯಾತ ವಾಗ್ಮಿಗಳು
ಚಿಕ್ಕಮಗಳೂರು

ವಿಷಯ : ಧಾರ್ಮಿಕ ಆಚಾರ ಜೀವಕ್ಕೆ ಸಂಸ್ಕಾರ

(ಉಪನ್ಯಾಸದ ನಂತರ ಆನ್‌ಲೈನ್‌ನಲ್ಲಿ ಬರುವ ಪ್ರಶ್ನೆಗಳಲ್ಲಿ ಆಯ್ದವುಗಳಿಗೆ ಉತ್ತರಿಸಲಾಗುವುದು)

ಆನ್‌ಲೈನ್ ಮೂಲಕ ನೇರವಾಗಿ ವೀಕ್ಷಿಸಲು ಹಾರ್ದಿಕ ಸ್ವಾಗತ

YouTube http://Youtube.com/c/JSSMahavidyapeethaonline

https://www.facebook.com/JSSMVP

**ಜ್ಞಾನವಾರಿಧಿ** ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು 2020ರ ಡಿಸೆಂಬರ್ ತಿಂಗಳಿನಿಂದ ಪ್ರತಿ ಸೋಮವಾರ ಏರ್ಪಡಿಸಿಕೊಂಡು ಬರಲಾಗುತ್ತಿದೆ. ಧರ್ಮ, ಅಧ್ಯಾತ್ಮ, ಯೋಗ, ಕಲೆ, ಸಾಹಿತ್ಯ, ಸಂಸ್ಕೃತಿ, ಆರೋಗ್ಯ, ಜೀವನಶೈಲಿ, ವಿಜ್ಞಾನ, ತಂತ್ರಜ್ಞಾನ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ.

**ಶ್ರೀ ಹಿರೇಮಗಳೂರು ಕಣ್ಣನ್‌ರವರು** ಪ್ರಖ್ಯಾತ ವಾಗ್ಮಿಗಳು. ಕನ್ನಡ ಪೂಜಾರಿ, ಕಣ್ಣನ್ ಮಾಮಾ ಎಂದೇ ಚಿರಪರಿಚಿತರು. ತಮಿಳುನಾಡಿನ ಕೆಲಮಂಗಲ ಮೂಲದವರಾದರೂ ಕನ್ನಡದ ಮೇಲಿನ ಪ್ರೀತಿ ಅಪಾರ ಮತ್ತು ಅನನ್ಯ. ಅವರು ಅರ್ಚಕರಾಗಿರುವ ಹಿರೇಮಗಳೂರಿನ ಶ್ರೀ ಕೋದಂಡ ಕಲ್ಯಾಣರಾಮನ ದೇವಾಲಯದಲ್ಲಿ ಕಳೆದ ನಾಲ್ಕು ದಶಕಗಳಿಂದ ವರ್ಷದ ಎಲ್ಲಾ ದಿನಗಳಲ್ಲೂ ಕನ್ನಡದಲ್ಲಿ ಮಂತ್ರಗಳನ್ನು ಪಠಿಸುತ್ತಾ ದೇವತಾರ್ಚನೆ, ಪೂಜೆ, ಸೇವೆಗಳನ್ನು ಸಲ್ಲಿಸುತ್ತಿದ್ದಾರೆ. ನಿತ್ಯವೂ ಹನುಮ ಸಮೇತನಾದ ಶ್ರೀರಾಮ, ಲಕ್ಷ್ಮಣ, ಸೀತಾಮಾತೆಯರಿಗೆ ಕನ್ನಡದಲ್ಲಿಯೇ ಪೂಜೆ ಮಾಡುವರು. ಇವರ ಕನ್ನಡ ಪೂಜೆಯನ್ನು ನೋಡಲೆಂದೇ ಅನೇಕ ವಿದ್ವಾಂಸರು, ಕವಿಗಳು, ಗಣ್ಯಾತಿಗಣ್ಯರು ಆಗಮಿಸಿ ಪೂಜೆಯನ್ನು ಕಣ್ತುಂಬಿಕೊಂಡಿದ್ದಾರೆ.

ಬಹುಮುಖ ಪ್ರತಿಭಾವಂತರಾದ ಕಣ್ಣನ್‌ರವರು ಉದಯ ಟಿವಿ ವಾಹಿನಿಯ ಹರಟೆ ಮತ್ತು ಸರ್ವಜ್ಞಾಮೃತ ಕಾರ್ಯಕ್ರಮಗಳ ಮೂಲಕ ಕನ್ನಡಿಗರ ಮನೆ ಮತ್ತು ಮನಗಳನ್ನು ಮುಟ್ಟಿರುವರು. ಪ್ರಸ್ತುತ ದಿಗ್ವಿಜಯ ಟಿವಿ ವಾಹಿನಿಯಲ್ಲಿ ಶುಭನುಡಿ ಮತ್ತು ಕಟ್ಟೆಪುರಾಣ ಎಂಬ ವಿನೂತನ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದಾರೆ. ನಮ್ ರೇಡಿಯೋದಲ್ಲಿ ಕಾಫಿ ವಿತ್ ಕಣ್ಣನ್ ಎಂಬ ವಿಶೇಷ ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದಾರೆ. ಉತ್ತಮ ಬರಹಗಾರರು. ಹಲವಾರು ಪತ್ರಿಕೆಗಳಲ್ಲಿ ಇವರ ನೂರಾರು ಲೇಖನಗಳು ಮತ್ತು ಅಂಕಣ ಬರಹಗಳು ಪ್ರಕಟವಾಗಿವೆ. ಕಣ್ಣನ್ ನೋಟ, ನುಡಿಪೂಜೆ, ಗುಡಿ ಚೆಲ್ಲಿದ ನುಡಿ ಸೇರಿದಂತೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

**ಜ್ಞಾನವಾರಿಧಿ–51 * 22 ನವೆಂಬರ್ 2021**

**ಪ್ರೊ. ಪ್ರೇಮಶೇಖರ**

ಖ್ಯಾತ ಅಂಕಣಕಾರರು, ವಿಜಯವಾಣಿ
ನವದೆಹಲಿ

ವಿಷಯ : ಮನಸ್ಸು ಒಂದು ಮಹಾಶಕ್ತಿ

**ಜ್ಞಾನವಾರಿಧಿ–52 * 29 ನವೆಂಬರ್ 2021**

**ಡಾ. ಎಸ್.ವಿ. ನರಸಿಂಹನ್**

ಖ್ಯಾತ ವೈದ್ಯರು
ವೀರಾಜಪೇಟೆ

ವಿಷಯ : ಜೀವ ವೈವಿಧ್ಯತೆ ಮತ್ತು ಭಾರತೀಯ ಸಂಸ್ಕೃತಿ